ಕರ್ನಾಟಕ ಸರ್ಕಾರ

**Government of Karnataka**

# ಕರ್ನಾಟಕ ಖಾಸಗಿ ನರ್ಸಿಂಗ್ ಹೋಂಗಳ (ವಿನಿಯಮನ) ಅಧಿನಿಯಮ, 1976

(ಕರ್ನಾಟಕ ಅಧಿನಿಯಮ, 1976ರ 75)

# KARNATAKA PRIVATE NURSING HOMES (REGULATION) ACT, 1976

**(Karnataka Act No. 75 of 1976)**

ಬೆಂಗಳೂರು:

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆ ಇಲಾಖೆಯ ನಿರ್ದೇಶಕರಿಂದ ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿದೆ

# ಕರ್ನಾಟಕ ಖಾಸಗಿ ನರ್ಸಿಂಗ್ ಹೋಂಗಳ (ವಿನಿಯಮನ) ಅಧಿನಿಯಮ, 1976

**(ಕರ್ನಾಟಕ ಅಧಿನಿಯಮ, 1976ರ 75)**

# KARNATAKA PRIVATE NURSING HOMES (REGULATION) ACT, 1976

**(Karnataka Act No. 75 of 1976)**

# ಕರ್ನಾಟಕ ಖಾಸಗಿ ನರ್ಸಿಂಗ್ ಹೋಂಗಳ (ವಿನಿಯಮನ) ಅಧಿನಿಯಮ, 1976

## (ಕರ್ನಾಟಕ ಅಧಿನಿಯಮ, 1976ರ 75)

### ವಿಷಯಾನುಕ್ರಮಣಿಕೆ


| | ಪ್ರಕರಣಗಳು: | ಪುಟಗಳು |
|---|---|---|
| 1. | ಸಂಕ್ಷಿಪ್ತ, ಹೆಸರು, ಮತ್ತು ಪ್ರಾರಂಭ | 1 |
| 2. | ಪರಿಭಾಷೆಗಳು | 1–3 |
| 3. | ಖಾಸಗಿ ನರ್ಸಿಂಗ್ ಹೋಂಗಳಿಗೆ ಲೈಸೆನ್ಸು ಕೊಡುವುದು | 5 |
| 4. | ಗುಣಮಟ್ಟಗಳು | 5 |
| 5. | ವಿಧಿಸಬೇಕಾದ ಫೀಜು | 5 |
| 6. | ಲೈಸೆನ್ಸಿಗಾಗಿ ಅರ್ಜಿ | 5 |
| 7. | ಅರ್ಜಿಗಳ ವಿಲೆ | 7 |
| 8. | ಅರ್ಜಿಗಳನ್ನು ವಿಲೆ ಮಾಡುವಲ್ಲಿ ಗಮನಿಸಬೇಕಾದ ಅಂಶಗಳು | 7 |
| 9. | ಪರಿಶೀಲನೆ, ಇತ್ಯಾದಿ | 7–9 |
| 10. | ಕರ್ತವ್ಯ ಲೋಪ | 9 |
| 11. | ಅಪೀಲುಗಳು | 9 |
| 12. | ದಂಡ | 9–11 |
| 13. | ಅಪರಾಧಗಳ ಸಂಜ್ಞೇಯತೆ | 11 |
| 14. | ನಷ್ಟ ಭರ್ತಿ | 11 |
| 15. | ನಿಯಮಗಳು | 11 |
| 16. | ರಾಜ್ಯ ವಿಧಾನಮಂಡಲದ ಮುಂದೆ ನಿಯಮಗಳನ್ನು ಇರಿಸುವುದು | 13 |
| 17. | ಕರ್ನಾಟಕ ಅಧ್ಯಾದೇಶ, 1976ರ 25ರ ನಿರಸನ | 13 |

**KARNATAKA PRIVATE NURSING HOMES**

**(REGULATION) ACT, 1976**

**(Karnataka Act No. 75 of 1976)**

**CONTENTS**


| | Sections | Pages |
|---|---|---|
| 1. | Short title and commencement | |
| 2. | Definition | |
| 3. | Private Nursing Homes to be licenced | |
| 4. | Standards | |
| 5. | Fees to be charged | |
| 6. | Application for licence | |
| 7. | Disposal of Application | |
| 8. | Factors to be taken into account in disposing of application | |
| 9. | Inspection, etc. | |
| 10. | Defaults | |
| 11. | Appeals | |
| 12. | Penalty | |
| 13. | Cognizance of offence | |
| 14. | Indemnity | |
| 15. | Rules | |
| 16. | Rules to be placed before the State Legislature | |
| 17. | Repeal of Karnataka Ordinance No. 25 of 1976 | |

## ಕರ್ನಾಟಕ ಅಧಿನಿಯಮ, 1976ರ 75

**(1976ರ ಡಿಸೆಂಬರ್ ನಾಲ್ಕನೇ ದಿನಾಂಕದಂದು ಕರ್ನಾಟಕ ಗೆಜೆಟ್ಟಿನ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿದೆ)**

## ಕರ್ನಾಟಕ ಖಾಸಗಿ ನರ್ಸಿಂಗ್ ಹೋಂಗಳ (ವಿನಿಯಮನ) ಅಧಿನಿಯಮ, 1976

**(1976ರ ಡಿಸೆಂಬರ್ ಒಂದನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆದಿದೆ)**

ರಾಜ್ಯದಲ್ಲಿನ ಖಾಸಗಿ ನರ್ಸಿಂಗ್ ಹೋಂಗಳನ್ನು ವಿನಯಮನಗೊಳಿಸುವ ಮತ್ತು ನಿಯಂತ್ರಿಸುವ ಬಗ್ಗೆ ಉಪಬಂಧಿಸುವ ಅಧಿನಿಯಮ.

ರಾಜ್ಯದಲ್ಲಿನ ಖಾಸಗಿ ನರ್ಸಿಂಗ್ ಹೋಂಗಳನ್ನು ಯಾವ ವಿನಿಯಮಗಳಿಗೂ ಒಳಪಡದೆ ನಡೆಸುತ್ತಿರುವುದರಿಂದ; ಮತ್ತು

ಸಾರ್ವಜನಿಕ ಹಿತದೃಷ್ಟಿಯಿಂದ ಅವುಗಳನ್ನು ವಿನಿಯಮನಗೊಳಿಸುವುದು ಸಮಯೋಚಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:

**1. ಸಂಕ್ಷಿಪ್ತ ಹೆಸರು, ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು, ಕರ್ನಾಟಕ ಖಾಸಗಿ ನರ್ಸಿಂಗ್ ಹೋಂಗಳ (ವಿನಿಯಮನ) ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) ಇದು 1976ರ ನವೆಂಬರ್ ನಾಲ್ಕನೇ ದಿನಾಂಕದಂದು ಜಾರಿಗೆ ಬಂದಿದೆಯೆಂದು ಭಾವಿಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,–

(1) 'ಗೊತ್ತುಪಡಿಸಿದ ದಿನ' ಎಂದರೆ 1ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಲಾದ ದಿನಾಂಕ;

(2) 'ಸಕ್ಷಮ ಪ್ರಾಧಿಕಾರ' ಎಂದರೆ, ಈ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರದ ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರವು ನೇಮಿಸಿದ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಪ್ರಾಧಿಕಾರ ಮತ್ತು ಬೇರೆ ಬೇರೆ ಪ್ರಕಾರ್ಯಗಳನ್ನು ನಿರ್ವಹಿಸಲು ಬೇರೆ ಬೇರೆ ವ್ಯಕ್ತಿಗಳನ್ನು ಅಥವಾ ಪ್ರಾಧಿಕಾರಗಳನ್ನು ನೇಮಿಸಬಹುದು;

(3) 'ಲೈಸೆನ್ಸ್' ಎಂದರೆ, ಈ ಅಧಿನಿಯಮದ ಉಪ–ಬಂಧಗಳ ಮೇರೆಗೆ ಕೊಡಲಾದ ಲೈಸೆನ್ಸು;

(4) ಖಾಸಗಿ ನರ್ಸಿಂಗ್ ಹೋಂಗೆ ಸಂಬಂಧಪಟ್ಟಂತೆ 'ವ್ಯವಸ್ಥಾಪಕ' ಎಂದರೆ, ಖಾಸಗಿ ನರ್ಸಿಂಗ್ ಹೋಂನ ಆಡಳಿತವನ್ನು ಹೊಂದಿರುವ ಅಥವಾ ಅದನ್ನು ನಡೆಸುವ ಹೊಣೆಯನ್ನು ಹೊತ್ತಿರುವ, ಯಾವುದೇ ಹೆಸರು ಅಥವಾ ಪದನಾಮದಿಂದ ಕರೆಯಲಾಗುವ ವ್ಯಕ್ತಿ;

(5) 'ವೈದ್ಯಕೀಯ ಚಿಕಿತ್ಸೆ' ಎಂದರೆ, ಆಧುನಿಕ ವೈದ್ಯಕೀಯ ಪದ್ಧತಿ ಅಥವಾ ಆಯುರ್ವೇದ, ಯುನಾನಿ, ಹೋಮಿಯೋಪಥಿ ಮತ್ತು ಪ್ರಕೃತಿ ಚಿಕಿತ್ಸೆ ಮೊದಲಾದ ಇತರ ಯಾವುದೇ ಪದ್ಧತಿಯ ವೈದ್ಯಕೀಯ ಚಿಕಿತ್ಸೆ;

(6) "ಆಧುನಿಕ ವೈದ್ಯ ಪದ್ಧತಿ" ಎಂದರೆ, ಅಲೋಪತಿಯ ವೈದ್ಯ ಪದ್ಧತಿ, ಪ್ರಸೂತಿ ಶಾಸ್ತ್ರ ಮತ್ತು ಶಸ್ತ್ರಚಿಕಿತ್ಸೆಯ ಪಾಶ್ಚಿಮಾತ್ಯ ವಿಧಾನಗಳು;

**KARNATAKA ACT No. 75 OF 1976**

**(First published in the Karnataka Gazette Extraordinary on the Fourth day of December 1976)**

# THE KARNATAKA PRIVATE NURSING HOMES (REGULATION) ACT, 1976

**(Received the assent of the Governor on the First day of December 1976)**

An Act to provide for the regulation and control of private nursing homes in the State.

Whereas the private nursing homes in the State are being run an unregulated manner; and

Whereas it is expedient in public interest to regulate them;

Be it enacted by the Karnataka State Legislature in the Twenty-seventh year of the Republic of India as follows:-

**1. Short title and commencement.-** (1) This Act may be called the Karnataka Private Nursing Homes (Regulation) Act, 1976.

(2) It shall be deemed to have come into force on the Fourth day of November, 1976.

**2. Definition.-** In this Act, unless the context otherwise requires.-

(1) 'appointed day' means the date specified in sub-section (2) of section 1;

(2) 'competent authority' means any person or persons or authority appointed by the State Government to perform the functions of competent authority under this Act and different persons or authorities may be appointed to perform different function;

(3) 'licence' means a licence granted under the provisions of the Act;

(4) 'manager' in relation to private nursing home means the person, by whatever name or designation called, who is in charge of or is entrusted with the running of a private nursing home;

(5) 'medical treatment' means treatment in modern medicine or in any other system of medicine like the Ayurvedic, the Unani, the Homoeopathic and the Naturopathic;

(6) 'modern medicine' means the western method of allopathic medicine, obstetrics and surgery;

(7) **"ನರ್ಸಿಂಗ್ ಹೋಂ"** ಎಂದರೆ, ಮನುಷ್ಯನ ಕಾಯಿಲೆಗಳಿಗೆ ನಿವಾರಕ ಮತ್ತು ಅಥವಾ ಪರಿಹಾರಕ ವೈದ್ಯಕೀಯ ಚಿಕಿತ್ಸೆಯನ್ನು ಕೊಡುವ ಆಸ್ಪತ್ರೆ ಅಥವಾ ಚಿಕಿತ್ಸಾಲಯ ಅಥವಾ ಇತರ ಯಾವುದೇ ಸ್ಥಳ;

(8) **'ಖಾಸಗಿ ನರ್ಸಿಂಗ್ ಹೋಂ'** ಎಂದರೆ, ರಾಜ್ಯ ಅಥವಾ ಕೇಂದ್ರ ಸರ್ಕಾರದ ಒಡೆತನಕ್ಕೆ ಸೇರದ ಅಥವಾ ಅದರಿಂದ ಪುರಸ್ಕೃತವಾಗಿರದ ನರ್ಸಿಂಗ್ ಹೋಂ.

(9) **'ಪ್ರಕರಣ'** ಎಂದರೆ, ಈ ಅಧಿನಿಯಮದ ಪ್ರಕರಣ.

**3. ಖಾಸಗಿ ನರ್ಸಿಂಗ್ ಹೋಂಗಳಿಗೆ ಲೈಸೆನ್ಸು ಕೊಡುವುದು.–** ಗೊತ್ತುಪಡಿಸಿದ ದಿನಾಂಕದಂದು ಅಥವಾ ಆ ತರುವಾಯ, ಲೈಸೆನ್ಸಿನ ನಿಬಂಧನೆಗಳ ಮತ್ತು ಷರತ್ತುಗಳ ಮೇರೆಗೆ ಮತ್ತು ಅವುಗಳಿಗೆ ಅನುಸಾರವಾಗಿ ಹೊರತು, ರಾಜ್ಯದಲ್ಲಿ ಯಾವ ಖಾಸಗಿ ನರ್ಸಿಂಗ್ ಹೋಮನ್ನೂ ಸ್ಥಾಪಿಸತಕ್ಕದ್ದಲ್ಲ, ನಡೆಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ;

ಪರಂತು, ಗೊತ್ತುಪಡಿಸಿದ ದಿನಾಂಕದ ನಿಕಟ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಖಾಸಗಿ ನರ್ಸಿಂಗ್ ಹೋಂ, ಅಂಥ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗೆ ಲೈಸೆನ್ಸಿಗೆ ಅರ್ಜಿ ಸಲ್ಲಿಸತಕ್ಕದ್ದು ಮತ್ತು ಆ ಬಗ್ಗೆ ಆದೇಶಗಳಾಗುವವರೆಗೆ, ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಅದನ್ನು ನಡೆಸಿಕೊಂಡು ಹೋಗತಕ್ಕದ್ದು.

**4. ಗುಣಮಟ್ಟಗಳು.–** ಶಸ್ತ್ರ ಚಿಕಿತ್ಸಾ ಮಂದಿರ, ಶುಶ್ರೂಷೆ ಮತ್ತು ಇತರ ಸಿಬ್ಬಂದಿ ವರ್ಗ ಮತ್ತು ಅವರ ಅರ್ಹತೆಗಳು, ರೋಗಿಗಳಿಗೆ ಒದಗಿಸಬೇಕಾದ ಸೌಲಭ್ಯಗಳು, ನಿರ್ವಹಣೆ ಮತ್ತು ಇದೇ ತರಹದ ವಿಷಯಗಳ ಸಂಬಂಧದಲ್ಲಿ ಗೊತ್ತುಪಡಿಸಬಹುದಾದಂಥ, ಗುಣಮಟ್ಟಗಳನ್ನು ಪ್ರತಿಯೊಂದು ಖಾಸಗಿ ನರ್ಸಿಂಗ್ ಹೋಂ ಹೊಂದಿರತಕ್ಕದ್ದು.

**5. ವಿಧಿಸಬೇಕಾದ ಫೀಜು.–** (1) ಮಾಡಿದ ವೈದ್ಯಕೀಯ ಚಿಕಿತ್ಸೆಗಾಗಿ, ಗೊತ್ತುಪಡಿಸಬಹುದಾದಂಥ ಫೀಜುಗಳ ಶ್ರೇಣಿಗಳಿಗಿಂತ ಹೆಚ್ಚಿನ ಫೀಜನ್ನು ಯಾವ ನರ್ಸಿಂಗ್ ಹೋಮೂ ವಿಧಿಸತಕ್ಕದ್ದಲ್ಲ ಅಥವಾ ವಸೂಲು ಮಾಡತಕ್ಕದ್ದಲ್ಲ.

(2) ಕಾಯಿಲೆಯ ಸ್ವರೂಪ, ಚಿಕಿತ್ಸೆ ಮತ್ತು ಅದೇ ತರಹದ ಇತರ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಫೀಜನ್ನು ಗೊತ್ತುಪಡಿಸತಕ್ಕದ್ದು.

**6. ಲೈಸೆನ್ಸಿಗಾಗಿ ಅರ್ಜಿ.–** ಖಾಸಗಿ ನರ್ಸಿಂಗ್ ಹೋಮನ್ನು ಸ್ಥಾಪಿಸಲು, ನಡೆಸಲು, ನಿರ್ವಹಿಸಲು ಅಥವಾ ನಡೆಸಿಕೊಂಡು ಹೋಗಲು ಇಚ್ಛಿಸುವ ಪ್ರತಿಯೊಬ್ಬ ವ್ಯಕ್ತಿಯು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಫೀಜಿನೊಂದಿಗೆ ಸಕ್ಷಮ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

**7. ಅರ್ಜಿಗಳ ವಿಲೆ.–** (1) 6ನೇ ಪ್ರಕರಣದ ಮೇರೆಗೆ ಅರ್ಜಿಯು ಬಂದ ಮೇಲೆ ಮತ್ತು ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ಸಕ್ಷಮ ಪ್ರಾಧಿಕಾರವು ಆದೇಶದ ಮೂಲಕ ಲೈಸೆನ್ಸನ್ನು ಕೊಡಬಹುದು ಅಥವಾ ಕೊಡಲು ನಿರಾಕರಿಸಬಹುದು. ಲೈಸೆನ್ಸನ್ನು ನಿರಾಕರಿಸಿದ ಸಂದರ್ಭದಲ್ಲಿ, ಅಂಥ ನಿರಾಕರಣೆಯ ಬಗ್ಗೆ ಕಾರಣಗಳನ್ನು ಸಂಕ್ಷಿಪ್ತವಾಗಿ ಕೊಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೇ ಅರ್ಜಿದಾರನಿಗೆ ತಿಳಿಸತಕ್ಕದ್ದು:

ಪರಂತು, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ತೊಂಬತ್ತು ದಿವಸಗಳು ಮುಕ್ತಾಯವಾಗುವ ಮೊದಲು ಅಂಥ ಯಾವುದೇ ಉತ್ತರವು ಅರ್ಜಿದಾರನಿಗೆ ಬರದಿದ್ದಲ್ಲಿ, ಲೈಸೆನ್ಸನ್ನು ನಿರಾಕರಿಸಿರುವುದಾಗಿ ಭಾವಿಸತಕ್ಕದ್ದು.

(7) ‘nursing home’ means a hospital or a clinic or any other place where human diseases are given preventive and or curative medical treatment;

(8) ‘private nursing home’ means a nursing home which is not owned or sponsored by the State or the Central Government;

(9) ‘section’ means a section of this Act.

**3. Private Nursing Home to be licensed.-** On or after the appointed day, no private nursing home shall be established, run or maintained in the State except under and in accordance with the terms and conditions of a licence;

Provided that a private nursing home in existence immediately before the appointed day shall apply for the licence within a period of two months from such day and pending orders thereon may continue to be run but subject to the other provisions of this Act.

**4. Standards.-** Every private nursing home shall conform to the standards which may be prescribed regarding the operation theatre, the nursing and other staff and their qualifications, facilities to be provided to the patients, maintenance and like matters.

**5. Fees to be charged.-** (1) For the medical treatment given, no private nursing home shall charge or collect fees in excess of the scale of fees that may be prescribed.

(2) Fees shall be prescribed having regard to the nature of the disease, the treatment and other like matters.

**6. Application for licence.-** Every person desiring to establish, run, maintain or continue to run a private nursing home shall make an application to the competent authority in such form and along with such fee as may be prescribed.

**7. Disposal of applications.-** (1) On receipt of the application under section 6 and after such enquiry as he may deem necessary, the competent authority may, by order, grant or refuse to grant the licence. Where the licence is refused, brief reasons for such refusal shall be given.

(2) Every order under sub-section (1) shall, as soon as may be after it is made, be communicated to the applicant;

Provided that where no such communication is issued before the expiry of ninety days from the date on which the application was made, the licence shall be deemed to have been refused.

**8. ಅರ್ಜಿಗಳನ್ನು ವಿಲೆ ಮಾಡುವಲ್ಲಿ ಗಮನಿಸಬೇಕಾದ ಅಂಶಗಳು:–** 6ನೇ ಪ್ರಕರಣದ ಮೇರೆಗೆ ಅರ್ಜಿಗಳನ್ನು ವಿಲೆ ಮಾಡುವಲ್ಲಿ ಸಕ್ಷಮ ಪ್ರಾಧಿಕಾರವು ಕೆಳಕಂಡ ಅಂಶಗಳನ್ನು ಗಮನಿಸತಕ್ಕದ್ದು, ಎಂದರೆ:–

(ಕ) ನರ್ಸಿಂಗ್ ಹೋಮು ಇರುವ ಆವರಣವು ಆರೋಗ್ಯದ ದೃಷ್ಟಿಯಿಂದ ಅಥವಾ ಇತರ ರೀತಿಯಲ್ಲಿ ಸೂಕ್ತವಾಗಿದೆಯೆ;

(ಖ) ನರ್ಸಿಂಗ್ ಹೋಂನಲ್ಲಿ ಸಾಕಷ್ಟು ಜನ ಅರ್ಹ ಡಾಕ್ಟರುಗಳು, ದಾದಿಯರು, ತಾಂತ್ರಿಕ ಮತ್ತು ಇತರ ಸಿಬ್ಬಂದಿ ವರ್ಗದವರು ಇದ್ದಾರೆಯೆ; ಮತ್ತು

(ಗ) ನಿಯಮಿಸಬಹುದಾದಂಥ ಇತರ ಅಂಶಗಳು.

**9. ಪರಿಶೀಲನೆ ಇತ್ಯಾದಿ.–** (1) ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಲೈಸೆನ್ಸಿನ ಷರತ್ತುಗಳನ್ನು ವಿಧ್ಯುಕ್ತವಾಗಿ ಪಾಲಿಸಲಾಗುತ್ತಿದೆಯೆಂಬುದನ್ನು ಸಕ್ಷಮ ಪ್ರಾಧಿಕಾರವು, ಸ್ವತಃ ಮನದಟ್ಟು ಮಾಡಿಕೊಳ್ಳಲು ಖಾಸಗಿ ನರ್ಸಿಂಗ್ ಹೋಮನ್ನು ಯಾವುದೇ ಸಮಯದಲ್ಲಿ ಪರಿಶೀಲಿಸಬಹುದು.

(2) ಅಂಥ ಪರಿಶೀಲನೆಯ ಪರಿಣಾಮವಾಗಿ, ಯಾವುದೇ ದೋಷ ಅಥವಾ ಕೊರತೆ ಕಂಡು ಬಂದರೆ, ಸಕ್ಷಮ ಪ್ರಾಧಿಕಾರವು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಅವುಗಳನ್ನು ಸರಿಪಡಿಸಲು ನರ್ಸಿಂಗ್ ಹೋಂನ ವ್ಯವಸ್ಥಾಪಕನಿಗೆ ಆದೇಶದ ಮೂಲಕ ನಿರ್ದೇಶಿಸಬಹುದು. ಆ ತರುವಾಯ ಆ ವ್ಯವಸ್ಥಾಪಕನು ಅಂಥ ಪ್ರತಿಯೊಂದು ನಿರ್ದೇಶನವನ್ನು ಪಾಲಿಸತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರಕ್ಕೆ ಆ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.

**10. ಕರ್ತವ್ಯ ಲೋಪ.–** ಯಾವುದೇ ಖಾಸಗಿ ನರ್ಸಿಂಗ್ ಹೋಮ್ ಲೈಸೆನ್ಸಿನ ಷರತ್ತುಗಳ ಪೈಕಿ ಯಾವುದೇ ಷರತ್ತನ್ನು ಪಾಲಿಸಲು ತಪ್ಪಿದರೆ, ಅಥವಾ 9ನೇ ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪಿದರೆ ಅಥವಾ ಈ ಅಧಿನಿಯಮದ ಉಪಬಂಧಗಳ ಪೈಕಿ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ, ಸಕ್ಷಮ ಪ್ರಾಧಿಕಾರವು ಆದೇಶದ ಮೂಲಕ ಲೈಸೆನ್ಸನ್ನು ರದ್ದುಗೊಳಿಸಬಹುದು.

ಪರಂತು, ಉದ್ದೇಶಿತ ಕ್ರಮದ ಬಗ್ಗೆ ತಮ್ಮ ಮನವಿಯನ್ನು ಸಲ್ಲಿಸಲು ಸಂಬಂಧಪಟ್ಟ ವ್ಯಕ್ತಿಗಳಿಗೆ ಅವಕಾಶವನ್ನು ಕೊಟ್ಟ ಹೊರತು ಅಂಥ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

**11. ಅಪೀಲುಗಳು.–** (1) ಲೈಸೆನ್ಸಿಗಾಗಿ ಸಲ್ಲಿಸಿದ ಯಾವ ವ್ಯಕ್ತಿಯ ಅರ್ಜಿಯು ನಿರಾಕೃತವಾಗಿದೆಯೋ ಅಥವಾ ನಿರಾಕೃತವಾಗಿದೆಯೆಂದು ಭಾವಿತವಾಗಿದೆಯೋ ಅಂಥ ಯಾವನೇ ವ್ಯಕ್ತಿಯು ಮತ್ತು ಈ ಅಧಿನಿಯಮದ ಮೇರೆಗಿನ ಇತರ ಯಾವುದೇ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ನಿಯಮಿಸಿದ ಅಪೀಲು ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು.

(2) ಅಂಥ ಪ್ರತಿಯೊಂದು ಅಪೀಲನ್ನು, ಯಾವ ಆದೇಶಕ್ಕೆ ವಿರುದ್ಧವಾಗಿ ಅಪೀಲು ಸಲ್ಲಿಸಲಾಯಿತೋ ಆ ಆದೇಶವನ್ನು ತಿಳಿಸಿದ ದಿನಾಂಕದಿಂದ ಅಥವಾ ಆ ಆದೇಶವನ್ನು ಮಾಡಲಾಗಿದೆಯೆಂದು ಭಾವಿಸಲಾದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಸಲ್ಲಿಸತಕ್ಕುದು. ಆ ಅಪೀಲಿನ ಬಗ್ಗೆ ಅಪೀಲು ಪ್ರಾಧಿಕಾರವು ಮಾಡಿದ ಆದೇಶವು ಅಂತಿಮವಾಗಿರತಕ್ಕದ್ದು.

**12. ದಂಡ.–** ಈ ಅಧಿನಿಯಮದ ಉಪಬಂಧಗಳ ಪೈಕಿ ಯಾವುದೇ ಉಪಬಂಧವನ್ನು ಅಥವಾ ಲೈಸೆನ್ಸಿನ ನಿಬಂಧನೆ ಮತ್ತು ಷರತ್ತುಗಳ ಪೈಕಿ ಯಾವುದೇ ನಿಬಂಧನೆ ಮತ್ತು ಷರತ್ತನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ, ಆರು ತಿಂಗಳವರೆಗಿನ ಕಾರಾವಾಸಕ್ಕೆ ಅಥವಾ ಐದು ಸಾವಿರ ರೂಪಾಯಿಗಳವರೆಗಿನ ದಂಡಕ್ಕೆ ಗುರಿಯಾಗತಕ್ಕದ್ದು.

**8. Factors to be taken into account in disposing of applications.-** In disposing of the applications under section 6, the competent authority shall have regard to the following, namely,-

(a) whether the premises housing the nursing home is suitable, hygienically or otherwise;

(b) whether the nursing home is adequately staffed with qualified doctors, nurses, technical and other personnel; and

(c) such other factors as may be prescribed.

**9. Inspections, etc.-** (1) The competent authority may at any time inspect a private nursing home to satisfy himself that the provisions of this Act and the conditions of the licence are being duly observed.

(2) If as a result "o" such inspection any defects or deficiencies are noticed, the competent authority may, by order, direct the manager to remedy the same within such time as may be specified in the order. Thereupon, the manager shall comply with every such directions and make a report to the competent authority.

**10. Defaults.-** If any private nursing home commits default in observing any of the conditions of the licence or fails to comply with any direction issued under section 9 or contravenes any of the provisions of this Act, the competent authority may, by order, revoke the licence;

Provided that no such order shall be made except after giving the persons concerned an opportunity of making representations against the proposal.

**11. Appeals.-** (1) Any person whose application for licence is refused or deemed to have been refused and any person aggrieved by any other order under this Act may prefer an appeal to the prescribed appellate authority.

(2) Every such appeal shall be preferred within thirty days from the date the order appealed against is communicated or is deemed to have been made. The order of the appellate authority on appeal shall be final.

**12. Penalty.-** Whoever contravenes any of the provisions of this Act or the terms and conditions of a licence shall be liable, on conviction, to imprisonment which may extend to six months or with fine which may extend to five thousand rupees.

**13. ಅಪರಾಧಗಳ ಸಂಜ್ಞೇಯತೆ.–** ಸಕ್ಷಮ ಪ್ರಾಧಿಕಾರದ ಫಿರ್ಯಾದಿನ ಮೇಲಲ್ಲದೆ, ಈ ಅಧಿನಿಯಮದ ಮೇರೆಗಿನ ಯಾವ ಅಪರಾಧವನ್ನೂ ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**14. ನಷ್ಟ ಭರ್ತಿ.–** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸದ್ಭಾವನೆಯಿಂದ ಮಾಡಲಾದ ಯಾವುದೇ ಕಾರ್ಯದ ಸಂಬಂಧದಲ್ಲಿ ರಾಜ್ಯ ಸರಕಾರ ಅಥವಾ ರಾಜ್ಯ ಸರ್ಕಾರದ ಯಾವನೇ ಅಧಿಕಾರಿಯ ವಿರುದ್ಧವಾಗಿ ಯಾವ ದಾವೆಯನ್ನೂ ಅಥವಾ ಇತರ ಕಾನೂನು ಸಮ್ಮತ ವ್ಯವಹರಣೆಯನ್ನೂ ಹೂಡತಕ್ಕದ್ದಲ್ಲ.

**15. ನಿಯಮಗಳು.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿರುವ ಉಪಬಂಧದ ಸಾಮಾನ್ಯ ಅನ್ವಯಕ್ಕೆ ಬಾಧೆ ಬಾರದಂತೆ, ಅಂಥ ನಿಯಮಗಳು ಎಲ್ಲ ಅಥವಾ ಕೆಳಕಂಡ ವಿಷಯಗಳ ಪೈಕಿ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಕ) 4ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಗುಣಮಟ್ಟಗಳು;

(ಖ) 6ನೇ ಪ್ರಕರಣದ ಮೇರೆಗಿನ ಅರ್ಜಿಯ ನಮೂನೆ;

(ಗ) ಲೈಸೆನ್ಸನ್ನು ಕೊಡುವ ಬಗೆಗಿನ ಷರತ್ತುಗಳು;

(ಘ) 8ನೇ ಪ್ರಕರಣದ ಮೇರೆಗೆ ಗಮನಿಸಬೇಕಾದ ಇತರ ಅಂಶಗಳು;

(ಙ) ಅರ್ಜಿಗಳು ಮತ್ತು ಅಪೀಲುಗಳ ಬಗ್ಗೆ ಸಂದಾಯ ಮಾಡಬೇಕಾದ ಫೀಜು; ಮತ್ತು

(ಚ) ಮಾಡಲಾದ ವೈದ್ಯಕೀಯ ಚಿಕಿತ್ಸೆ, ಒದಗಿಸಿದ ವಸತಿ ಸೌಕರ್ಯ ಮತ್ತು ಸೌಲಭ್ಯಗಳಿಗೆ ವಿಧಿಸಬೇಕಾದ ಫೀಜು.

**16. ರಾಜ್ಯ ವಿಧಾನಮಂಡಲದ ಮುಂದೆ ನಿಯಮಗಳನ್ನು ಇರಿಸುವುದು:–** ಈ ಅಧಿನಿಯಮದ ಮೇರೆಗೆ ರಚಿತವಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದೇ ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕುದು ಮತ್ತು ಮೇಲೆ ಹೇಳಿದ ಅಧಿವೇಶನದ ನಿಕಟ ಪೂರ್ವದ ಅಧಿವೇಶನವು ಅಥವಾ ಅದರ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚಿತವಾಗಿ ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಸರ್ಕಾರವು ಸರಕಾರಿ ಗೆಜೆಟ್ಟಿನಲ್ಲಿ ಅಂಥ ಮಾರ್ಪಾಟು ಅಥವಾ ಶೂನ್ಯತೆಯನ್ನು ಅಧಿಸೂಚಿಸಿದ ದಿನಾಂಕದಿಂದ ಆ ನಿಯಮವು, ಸಂದರ್ಭಾನುಸಾರ ಅಂಥ ಮಾರ್ಪಾಡು ಹೊಂದಿದ ರೂಪದಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ಶೂನ್ಯತೆಯು ಅಂಥ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧೆಯುಂಟು ಮಾಡತಕ್ಕದ್ದಲ್ಲ.

**17. ಕರ್ನಾಟಕ ಅಧ್ಯಾದೇಶ, 1976ರ 25ರ ನಿರಸನ.–** (1) ಕರ್ನಾಟಕ ಖಾಸಗಿ ನರ್ಸಿಂಗ್ ಹೋಂಗಳ (ವಿನಿಯಮನ) ಅಧ್ಯಾದೇಶವು (ಕರ್ನಾಟಕ ಅಧ್ಯಾದೇಶ, 1976ರ 25) ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸಿತವಾಗಿದ್ದರೂ,

**13. Cognizance of offences.-** No offence under this Act shall be taken cognizance of except on complaint preferred by the competent authority.

**14. Indemnity.-** No suit or other legal proceeding shall lie against the State Government or any officer of the State Government in respect of anything which is in good faith done by or under this Act.

**15. Rules.-** (1) The State Government may, by notification make rules for carrying out the purposes of this Act.

(2) In particular and without prejudice to the generality of the foregoing provision, such rules may provide for all or any of the following matters, namely.-

(a) the standards referred to in section 4;

(b) form of the application under section 6;

(c) conditions subject to which licence may be granted;

(d) other factors to be taken into account under section 8;

(e) fees to be paid on applications and appeals; and

(f) the fees to be charged for the medical treatment given, the accommodation and facilities provided.

**16. Rules to be placed before the State Legislature.-** Every rule made under this Act, shall be laid, as soon as may be after it is made, before each House of the State Legislature, while it is in session for a total period of thirty days which may be comprised in one session or in two or more successive sessions, and if before the expiry of the session immediately following the session or the successive sessions aforesaid both Houses agree in making any modification in the rule of both Houses agree that the rule should not be made, the rule shall from the date on which the modification or annulment is notified by the Government in the official Gazette have effect only in such modified form or be of no effect, as the case may be; so, however, that any such modification, annulment shall be without prejudice to the validity of anything previously done under such rule.

**17. Repeal of Karnataka Ordinance No. 25 of 1976.-** (1) The Karnataka Private Nursing Homes (Regulation) Ordinance, 1976 (Karnataka Ordinance No. 25 of 1976) is hereby repealed.

(2) Notwithstanding such repeal,-

(1) ಸದರಿ ಅಧ್ಯಾದೇಶದ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(ii) ಖಾಸಗಿ ನರ್ಸಿಂಗ್ ಹೋಂನ್ನು ಸ್ಥಾಪಿಸಲು, ನಡೆಸಲು ಅಥವಾ ನಿರ್ವಹಿಸಲು ಅನುಮತಿಯನ್ನು ಕೋರಿ ಸಲ್ಲಿಸಿದ ಯಾವುದೇ ಅರ್ಜಿಯನ್ನು ಈ ಅಧಿನಿಯಮದ ಮೇರೆಗೆ ಲೈಸೆನ್ಸಿಗಾಗಿ ಸಲ್ಲಿಸಿದ ಅರ್ಜಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅದನ್ನು ವಿಲೆ ಮಾಡತಕ್ಕದ್ದು.

(i) anything done or any action taken under the said Ordinance shall be deemed to have been done or taken under the corresponding provisions of this Act;

(ii) any application made for permission to establish, run or maintain a private nursing home, shall be deemed to be an application made for licence under this Act and shall be disposed of accordingly.

(ಕರ್ನಾಟಕ ಸರ್ಕಾರದಿಂದ ಪ್ರಕಟಿತ)

ಭಾನಿ 20/ ರಾಶಾಶಾ/ 2009